





# ರಾಜಶೇಖರ್ ಎನ್ನುವ ತಂಪು ನಕ್ಷತ್ರ

**ಎಂ.ಎಸ್. ರಾಜಶೇಖರ್ ಸದಭಿರುಚಿಯ ಸಿನಿಮಾಗಳನ್ನು ರೂಪಿಸಿದ ಕನ್ನಡ ಸಿನಿಮಾ ನಿರ್ದೇಶಕರಲ್ಲೊಬ್ಬರು. ಸಾಹಿತ್ಯ ಕೃತಿಗಳನ್ನು ಆಧರಿಸಿದ ಸಿನಿಮಾಗಳನ್ನು ರೂಪಿಸುವ ಬಗ್ಗೆ ಒಲವಿದ್ದ ಅವರು, 'ರಾಜ್ ಕ್ಯಾಂಪ್'ನ ನಿರ್ದೇಶಕರೆಂದು ಹೆಸರಾಗಿದ್ದರು. ಅ. 29ರಂದು ನಿಧನರಾದ ರಾಜಶೇಖರ್ ಅವರಿಗೆ ನಿರ್ದೇಶಕರಾಗಿ ಸಲ್ಲಬೇಕಾಗಿದ್ದ ಗೌರವಗಳು ಸಲ್ಲಲಿಲ್ಲ ಎನ್ನುವುದು ಚಿತ್ರೋದ್ಯಮದ ಅವಕಾಶವಾದಿತನವನ್ನು ಸೂಚಿಸುವಂತಿದೆ.**

**ಮಹತಿ**
ಚಿತ್ರಗಳು: ಡಿ.ಸಿ. ನಾಗೇಶ್

ಅವರದು ನಾಲ್ಕು ಜನರಲ್ಲಿ ಎದ್ದುಕಾಣುವ ವ್ಯಕ್ತಿತ್ವವೇನಲ್ಲ. ಆದರೆ, ಅವರು ನಿರ್ದೇಶಿಸಿದ ಸಿನಿಮಾಗಳು ತಮ್ಮ ವೈವಿಧ್ಯದಿಂದ ಹಾಗೂ ಆಶಯದಿಂದ ಎದ್ದುಕಾಣುವಂತಿದ್ದವು. ಅವರು ಹೆಚ್ಚು ಮಾತನಾಡುತ್ತಿರಲಿಲ್ಲ. ಆದರೆ, ಅವರು ರೂಪಿಸಿದ ಸಿನಿಮಾಗಳು ಯಶಸ್ಸು ಕಾಣುವ ಮೂಲಕ ಜನಮೆಚ್ಚುಗೆ ಗಳಿಸಿದವು. ಸಾಕಷ್ಟು ಚಿತ್ರಗಳು ಯಶಸ್ವಿಯಾದ ನಂತರವೂ ಪ್ರಚಾರದ ಪ್ರಭೆಯಲ್ಲಿ ಹೆಚ್ಚು ಕೋರೈಸದ ನಿರ್ದೇಶಕ ಯಾರಾದರೂ ಇದ್ದರೆ ಅದು ಎಂ.ಎಸ್. ರಾಜಶೇಖರ್. ಎಪ್ಪತ್ತೈದು ವರ್ಷಗಳ ತಮ್ಮ ಬಾಳಿನುದ್ದಕ್ಕೂ ಅವರು ಪ್ರತಿಪಾದಿಸಿಕೊಂಡು ಬಂದಿದ್ದು ಸರಳತೆ ಹಾಗೂ ಸಜ್ಜನಿಕೆಯನ್ನು.

'ಧ್ರುವತಾರೆ' ಹಾಗೂ 'ಅನುರಾಗ ಅರಳಿತು' ರಾಜಶೇಖರ್ ನಿರ್ದೇಶನದ ರಾಜಕುಮಾರ್ ಅಭಿನಯದ ಚಿತ್ರಗಳು. ವಕೀಲನೊಬ್ಬ ರೈತರ ಪರವಾಗಿ ನಿಂತು ಕಬ್ಬಿನ ಕಾರ್ಖಾನೆಯ ವಿರುದ್ಧ ಹೋರಾಡುವುದು ಧ್ರುವತಾರೆ ಚಿತ್ರದ ಕಥೆ. ರಾಜಕಾರಣ ಹಾಗೂ ರೈತರ ಸಮಸ್ಯೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದ 'ಧ್ರುವತಾರೆ' ಈ ದಿನಕ್ಕೂ ಪ್ರಸ್ತುತ ಎನ್ನಿಸುವ ಸಿನಿಮಾ. ಕಾರ್ಖಾನೆಯ ಕಾರ್ಮಿಕನೊಬ್ಬ ತನ್ನ ಸಂಸ್ಥೆಯ ಒಡತಿಯನ್ನು ಮದುವೆಯಾಗಿ, ತನ್ನ ಸಜ್ಜನಿಕೆಯ ಮೂಲಕ ಅವಳ ಮನಸ್ಸನ್ನು